**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.**

## ಸಿ.ಸಿ.ನಂ. 81/2021

| | | |
|---|---|---|
| ಸಾಕ್ಷಿದಾರರ ಹೆಸರು | : | ಯಶ್ವಂತ್ ಸಿ.ಎಂ. |
| ತಂದೆಯ ಹೆಸರು | : | ಲೇಟ್ ಮಲ್ಲಯ್ಯ |
| ವಯಸ್ಸು | : | 60 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಮೈಸೂರು. |

**ಸಾಕ್ಷಿಯನ್ನು ದಿನಾಂಕಃ 09.04.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ಚಾಸಾ-1 ರಿಂದ ಚಾಸಾ-4 ಮತ್ತು ಚಾಸಾ-6 ರಿಂದ 9 ನನಗೆ ಗೊತ್ತು. ಆರೋಪಿತರು ನನಗೆ ಗೊತ್ತಿಲ್ಲ. ದಿನಾಂಕಃ 25.06.2020 ರಂದು ಪೋಲೀಸರು ಮಹಜರ್ ಮಾಡುವ ಕಾಲಕ್ಕೆ ಚಾಸಾ-2 ದಶರಥ ಚೌದರಿರವರ ಜಮೀನಿನಲ್ಲಿ ನನ್ನ ಜೊತೆ ಚಾಸಾ-2 ರಿಂದ ಚಾಸಾ-4 ಇದ್ದರು. ಮಹಜರ್ ನಲ್ಲಿ ಬರೆದಿರುವ ವಿಷಯಗಳನ್ನು ಪೋಲೀಸರು ನನಗೆ ಓದಿ ಹೇಳಿರುತ್ತಾರೆ. ಮಹಜರ್ ಅನ್ನು ಸುಮಾರು 02 ಗಂಟೆಗಳ ಕಾಲ ಮಾಡಿರುತ್ತಾರೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ, ಅದರಲ್ಲಿ ತಮ್ಮ ಸಹಿ ಇದೆಯೇ ಎಂದು ಕೇಳಲಾಗಿ ಸಾಕ್ಷಿಯು ಅದನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆ ಸ್ಥಳ ಮಹಜರ್ ಆಗಿದ್ದು, ಅದನ್ನು ಈಗಾಗಲೇ

ನಿ.ಪಿ.-2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿ.ಪಿ.-2(ಸಿ)** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಡಿ.ಆರ್.ಎಂ. ವಕೀಲರಿಂದಃ**

ಚಾಸಾ-2 ನನಗೆ ಸುಮಾರು 2008 ನೇ ಇಸವಿಯಿಂದ ಪರಿಚಯಸ್ಥರು. ಚಾಸಾ-2 ರವರ ಜಮೀನಿನಲ್ಲಿ ಮಹಜರ್ ಮಾಡಿರುತ್ತಾರೆಂದು ತಾವು ಹೇಳಿದ್ದು, ಅವರಿಗೆ ಸೇರಿದ ಜಮೀನಿನ ಸ.ನಂ. ಎಷ್ಟು ಎಂದು ಕೇಳಲಾಗಿ ಸಾಕ್ಷಿಯು ಸ.ನಂ. 16 ಎಂದು ನುಡಿಯುತ್ತಾರೆ. ಆರೋಪಿತರು ಮಲಾರದಹುಂಡಿ ಗ್ರಾಮದವರೆಂದರೆ ಸರಿ. ಚಾಸಾ-3, ಚಾಸಾ-2 ರವರಿಗೆ ಗೊತ್ತು ಎಂದರೆ ಸರಿ. ನನ್ನ ಜೊತೆ ಈ ದಿನ ಚಾಸಾ-3 ರವರು ಬಂದಿದ್ದಾರೆಂದರೆ ಸರಿ. ನಾನು ಮೈಸೂರಿನಲ್ಲಿ ವಾಸವಿರುತ್ತೇನೆ. ಚಾಸಾ-2 ರವರ ಜಮೀನಿನ ಪಕ್ಕದಲ್ಲಿ ನನ್ನ ಜಮೀನು ಇದೆ ಎಂದು ನುಡಿಯುತ್ತಾರೆ. ಚಾಸಾ-2 ರವರ ಜಮೀನಿನ ಯಾವ ದಿಕ್ಕಿಗೆ ತಮಗೆ ಸೇರಿದ ಜಮೀನು ಇದೆ ಎಂದರೆ ಸಾಕ್ಷಿಯು ದಕ್ಷಿಣ ದಿಕ್ಕಿಗೆ ಎಂದು ನುಡಿಯುತ್ತಾರೆ. ಸ.ನಂ. 16 ರ ಜಮೀನಿನಲ್ಲಿ ನನಗು ಮತ್ತು ಚಾಸಾ-2 ರವರಿಗು ಯಾವುದೇ ಜಮೀನು ಇಲ್ಲದಿದ್ದರು ಜಮೀನು ಇದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಚಾಸಾ-2 ರವರಿಗೆ ಸ.ನಂ. 16 ರಲ್ಲಿ ಜಮೀನು ಮತ್ತು ನನಗೆ ಸ.ನಂ. 16/3 ರಲ್ಲಿ 05 ಎಕರೆ ಜಮೀನು ಇರುತ್ತದೆಂದು ನುಡಿಯುತ್ತಾರೆ. ಪೋಲೀಸರು ತಮಗೆ ಮಹಜರ್ ಗೆ ಬರುವಂತೆ ನೋಟೀಸ್ ಏನಾದರೂ ಕೊಟ್ಟಿದ್ದರಾ ಎಂದರೆ ಸಾಕ್ಷಿಯು ನೋಟೀಸ್ ಕೊಟ್ಟಿಲ್ಲ ಪೋಲೀಸರು ಮಹಜರ್ ಮಾಡಲು ಬಂದಾಗ ಪಕ್ಕದ ಜಮೀನಿನವನಾದ

ನಾನು ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾಗ ಪೋಲೀಸರು ನನ್ನನ್ನು ಮಹಜರ್ ಸಾಕ್ಷಿದಾರರನ್ನಾಗಿ ಬರುವಂತೆ ನನ್ನನ್ನು ಕೇಳಿಕೊಂಡಿದ್ದು, ಅದಕ್ಕೆ ನಾನು ಒಪ್ಪಿ ಸಹಿ ಮಾಡಿರುತ್ತೇನೆಂದು ನುಡಿಯುತ್ತಾರೆ. ಪೋಲೀಸರು ಮಹಜರ್ ಅನ್ನು ಬರೆದಿರುತ್ತಾರೆ. ಆರೋಪಿತರಿಗು ಮತ್ತು ಚಾಸಾ-2 ರವರ ನಡುವೆ ಜಮೀನಿನ ಸಂಬಂಧ ಇದೇ ಹೆಚ್.ಡಿ.ಕೋಟೆ ನ್ಯಾಯಾಲಯದಲ್ಲಿ ಅಸಲು ದಾವಾ ನಂ. 68/2020, 70/2020 ಮತ್ತು 132/2022 ಎಂದು ದಾವೆಗಳು ಚಾಲ್ತಿಯಲ್ಲಿವೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿತರು ಚಾಸಾ-2 ರವರ ವಿರುದ್ಧ ದಾವೆ ಮಾಡಿರುವುದರಿಂದ ಅದರ ಪ್ರತಿಕಾರವಾಗಿ ಚಾಸಾ-2 ರವರು ಚಾಸಾ-1 ರವರ ಮೂಲಕ ಆರೋಪಿತರ ವಿರುದ್ಧ ಸುಳ್ಳು ದೂರು ದಾಖಲು ಮಾಡಿಸಿರುತ್ತಾರೆಂದರೆ ಸರಿಯಲ್ಲ. ಘಟನೆ ನಡೆಯಿತು ಎಂದು ಹೇಳಿದ ಜಾಗದ ಚೆಕ್ಕುಬಂದಿ ಹೇಳುವಿರಾ ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಚಾಸಾ-2 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ನಿ.ಪಿ.-2 ದಾಖಲೆಗೆ ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆಂದರೆ ಸರಿಯಲ್ಲ.

**ಮರು ವಿಚಾರಣೆ: ಇರುವುದಿಲ್ಲ.**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**